ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

**ಸಿ.ಸಿ.ನಂ.2867/2024.**

ದಿನಾಂಕ **05-01-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಸಾಕ್ಷಿಯ ಹೆಸರು | : | ರಾಜಪ್ಪ | DW-1. |
| ತಂದೆಯ ಹೆಸರು | : | ಈರಪ್ಪ | |
| ವಯಸ್ಸು | : | 37 ವರ್ಷ | |
| ಉದ್ಯೋಗ | : | ಚಿಕ್ಕ ಚಿಲ್ಲರೆ ಅಂಗಡಿ ಮತ್ತು ವ್ಯವಸಾಯ | |
| ವಾಸ | : | ನಂದಿಪುರ ಗ್ರಾಮ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

2022 ರಲ್ಲಿ ನಾನು ನನ್ನ ಗ್ರಾಮದಲ್ಲಿ ಚಿಲ್ಲರೆ ಅಂಗಡಿ ವ್ಯಾಪಾರ ನಡೆಸುತ್ತಿದ್ದೆ. 2022 ರ ಮೇ ತಿಂಗಳಿನಲ್ಲಿ ನಾನು ತಮ್ಮಟನಹಳ್ಳಿ ಗೇಟ್ ಬಳಿ ಇದ್ದ ಚಾಣುಕ್ಯ ವೈನ್ ಸ್ಟೋರಿನವರು ನನ್ನ ಮೂಲಕ ಮದ್ಯವನ್ನು ನನ್ನ ಗ್ರಾಮದ ಜನರಿಗೆ ಮಾರಾಟ ಮಾಡಿಸುತ್ತಿದ್ದರು.

ಆ ಸಮಯದಲ್ಲಿಯೇ ದೂರುದಾರರು ನನ್ನ ಬಳಿ ಬಂದು ಶಿವನಿ ಆರ್.ಎಸ್. ನಲ್ಲಿ ಇರುವ ಅವರ ದೇಸಾ ವೈನ್ ಶಾಪಿನ ವ್ಯಾಪ್ತಿಗೆ ನಮ್ಮ ಗ್ರಾಮವು ಬರುತ್ತದೆ, ಆ ಕಾರಣ ನಾನು ಚಾಣುಕ್ಯ ವೈನ್ ಶಾಪಿನಿಂದ ಮದ್ಯದ ವ್ಯವಹಾರ ಮಾಡಬಾರದು ದೂರುದಾರರ ವೈನ್ ಶಾಪಿನಿಂದಲೇ ವ್ಯವಹಾರ ಮಾಡಬೇಕು ಇಲ್ಲವಾದಲ್ಲಿ ನಾನು ಪೊಲೀಸರಿಗೆ ದೂರು ನೀಡುತ್ತೇನೆ ಎಂದು ಹೇಳಿರುತ್ತಾರೆ. ಆ ಕಾರಣ ದೂರುದಾರರು ಆ ರೀತಿ ಹೇಳಿದ 4 ತಿಂಗಳ ನಂತರ ನಾನು ದೂರುದಾರರ ದೇಸಾ ವೈನ್ ರವರಿಂದ ಮದ್ಯವನ್ನು ಖರೀದಿ ಮಾಡಿಕೊಂಡು ಪಡೆದುಕೊಂಡು ತಂದು ನನ್ನ ಗ್ರಾಮದವರಿಗೆ ಮಾರಾಟ ಮಾಡಿ ಅದರಿಂದ ಬಂದ ಹಣವನ್ನು ನಾನು ದೇಸಾ ವೈನ್ಸ್ ಶಾಪಿನವರಿಗೆ ಫೋನ್ ಪೇ ಮೂಲಕ ಹಾಕುತ್ತಿದ್ದೆ. ನಾನು ಹಣವನ್ನು ನನ್ನ ಎಸ್ ಬಿ ಐ ಖಾತೆಯಿಂದ ಒಮ್ಮೆ ದೇಸಾ ವೈನ್ ಶಾಪಿನ ಅಕೌಂಟ್ ಗೆ ಹಾಗೂ ಕೆಲವೊಮ್ಮೆ ದೂರುದಾರರ ಮಗನಾದ ಅಜಯ್ ದೇಸಾ ರವರ ಖಾತೆಗೆ ಹಾಕುತ್ತಿದ್ದೆ.

ನಾನು ಮದ್ಯವನ್ನು ಗ್ರಾಮದಲ್ಲಿ ಮಾರಾಟ ಮಾಡಿ ಹಣವನ್ನು ಅವರಿಗೆ ಹಾಕುವ ಕ್ರಮವಿದ್ದ ಕಾರಣ ಅವರು ನನ್ನಿಂದ ನನ್ನ ಕೆನರಾ ಬ್ಯಾಂಕ್ ಖಾತೆಗೆ ಸೇರಿದ 4 ಚೆಕ್ ಗಳನ್ನು ಭದ್ರತೆಗೆಂದು ಪಡೆದುಕೊಂಡಿದ್ದರು. ನಾನು ದೇಸಾ ವೈನ್ಸ್ ಮತ್ತು ಅಜಯ್ ದೇಸಾ ರವರ ಖಾತೆಗೆ ಒಟ್ಟು ರೂ.6 ಲಕ್ಷ ಹಣವನ್ನು ಹಾಕಿರುತ್ತೇನೆ.

ಆ ನಂತರ ನಾನು ಮದ್ಯ ಮಾರಾಟ ಮಾಡುವುದಿಲ್ಲ, ನನಗೆ ಸರಿಯಾಗುತ್ತಿಲ್ಲ ಎಂದು ಅವರ ಅಂಗಡಿಯಿಂದ  ಮದ್ಯ ವ್ಯವಹಾರ ಮಾಡುವುದನ್ನು ಬಿಟ್ಟಿರುತ್ತೇನೆ. ಆ ನಂತರ ನಮ್ಮ ಊರಿನವರು ಮತ್ತಿಘಟ್ಟದಲ್ಲಿರುವ ಇನ್ನೊಂದು ಅಂಗಡಿಯಿಂದ ಮದ್ಯ ಖರೀದಿ ಮಾಡಲು ಪ್ರಾರಂಭಸಿರುತ್ತಾರೆ, ಆ ಕಾರಣ ಅವರಿಗೆ ನಷ್ಟವಾಗುತ್ತಿದೆ ಎಂಬ ದುರುದ್ದೇಶದಿಂದ ಚೆಕ್ ಅನ್ನು ಬ್ಯಾಂಕ್‌ಗೆ ಹಾಜರುಪಡಿಸಿ ಸುಳ್ಳು ಕೇಸು ದಾಖಲು ಮಾಡಿರುತ್ತಾರೆ.

ನಾನು ದೂರುದಾರರ ಬಳಿ ಹಲವಾರು ಬಾರಿ ನನ್ನಿಂದ ಪಡೆದಿದ್ದ ಚೆಕ್ ಅನ್ನು ವಾಪಾಸು ನೀಡುವಂತೆ ಕೇಳಿರುತ್ತೇನೆ. ಆದರೂ ಸಹಃ ಅವರು ಕೊಡುತ್ತೇನೆ ಹೇಳಿ ಕೊಟ್ಟಿರುವುದಿಲ್ಲ. ನನಗೆ ಮುಕ್ಕಾಲು ಎಕರೆ ಜಮೀನು ಅಷ್ಟೇ ಇದೆ, ಅದರಿಂದ ಕಡಿಮೆ ಆದಾಯ ಬರುತ್ತಿದೆ. ನಾನು ದೂರುದಾರರಿಂದ ರೂ.8 ಲಕ್ಷ ಹಣ ಸಾಲವಾಗಿ ಪಡೆದುಕೊಳ್ಳುವ ಅವಶ್ಯಕತೆ ಇರಲಿಲ, ಅದನ್ನು ಪಡೆಯುವಷ್ಟು ಶಕ್ತನು ನಾನು ಆಗಿರುವುದಿಲ್ಲ. ನಾನು ದೂರುದಾರರಿಂದ ಯಾವತ್ತು ಯಾವುದೇ ಹಣ ಪಡೆದಿಲ್ಲ. ನಾನು ಹಣ ಹಾಕಿದ ಬಾಬ್ತು ದಾಖಲೆಗಳನ್ನು ಹಾಜರುಪಡಿಸುತ್ತೇನೆ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆಂದು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.